1	2	3	4	5	6	7
14	Davanagere	53933	341260	395193	138551	533744
15	Dharwad	32809	272213	305022	149896	454918
16	Gadag	31737	161762	193499	93391	286890
17	Gulbarga	104530	562801	667331	296979	964310
18	Hassan	25098	368487	393585	125825	519410
19	Haveri	50536	262522	313058	100387	413445
20	Kodagu	6128	83807	89935	63103	153038
21	Kolar	33127	281373	314500	106824	421324
22	Koppal	42062	210047	252109	95100	347209
23	Mandya	37209	361203	398412	178699	577111
24	Mysore	51104	533995	585099	174629	759728
25	Raichur	60279	273327	333606	153096	486702
26	Ramanagar	20229	192690	212919	90368	303287
27	Shimoga	41463	271059	312522	151757	464279
28	Tumkur	56307	463849	520156	194832	714988
29	Udupi	17873	96676	144549	120341	234890
30	Uttara Kannada	16895	216549	233444	132684	366128
	GRAND TOTAL	**1199700**	**8641949**	**9841649**	**5297772**	**15139421**

ರಾಜ್ಯದಲ್ಲಿ ಪ್ರತಿದಿನ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣ ಮತ್ತು ಅಗತ್ಯವಿರುವ ಪ್ರಮಾಣ

206 (610) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್) ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿದಿನ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು ಹಾಗೂ ಪ್ರತಿದಿನಕ್ಕೆ ಅಗತ್ಯವಿರುವ ವಿದ್ಯುತ್ ಪ್ರಮಾಣ ಎಷ್ಟು; (ವಿವರ ನೀಡುವುದು)

ಆ) ಜಲಾಶಯಗಳಲ್ಲಿ ನೀರಿನ ಮಟ್ಟ ದಿನೇ ದಿನೇ ಇಳಿಯುತ್ತಿರುವುದರಿಂದ ಉತ್ಪಾದನೆಯ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಿಕೊಂಡಿರುವ ಕ್ರಮವೇನು;

ಇ) ಬೇಸಿಗೆಯು ಹತ್ತಿರವಾಗುತ್ತಿರುವುದರಿಂದ, ನಿರಂತರ ವಿದ್ಯುತ್ ಸರಬರಾಜು ಮಾಡಲು ಸರ್ಕಾರ ಮಾಡಿಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

ಈ) ಖಾಸಗಿ ಕಂಪನಿಗಳಿಂದ ವಿದ್ಯುತ್ ಖರೀದಿಸುತ್ತಿರುವುದು ನಿಜವೇ;

ಉ) ಹಾಗಿದ್ದಲ್ಲಿ, ಪ್ರತಿದಿನ ಎಷ್ಟು ಯೂನಿಟ್ ವಿದ್ಯುತ್ ಖರೀದಿಸಲಾಗುತ್ತಿದೆ ಹಾಗೂ ಪ್ರತಿ ಯೂನಿಟ್ಟಿಗೆ ನೀಡುತ್ತಿರುವ ಹಣವೆಷ್ಟು; (ವಿವರ ನೀಡುವುದು)?

ಕು॥ ಶೋಭಾ ಕರಂದ್ಲಾಜೆ (ಇಂಧನ ಸಚಿವರು):

ಅ) ರಾಜ್ಯದಲ್ಲಿ ಪ್ರಸ್ತುತ ಪ್ರತಿದಿನ ಎಲ್ಲಾ ಮೂಲಗಳಿಂದ ಅಂದಾಜು 137 ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದೆ. ಪ್ರಸ್ತುತ ದಿನಗಳಲ್ಲಿ ರಾಜ್ಯದ ಪ್ರತಿದಿನ ಬೇಡಿಕೆ ಅಂದಾಜು 167 ಮಿಲಿಯನ್ ಯೂನಿಟ್‌ಗಳಷ್ಟಾಗಿರುತ್ತದೆ.

ಆ) ಮತ್ತು ಇ) ರಾಜ್ಯದ ಪ್ರಮುಖ ಜಲಾಶಯಗಳಲ್ಲಿನ ನೀರಿನ ಮಟ್ಟವನ್ನು ಗಮನದಲ್ಲಿರಿಸಿಕೊಂಡು, ರಾಜ್ಯ ಸರ್ಕಾರವು ಕಳೆದ ಸೆಪ್ಟೆಂಬರ್ 2010ರಿಂದ ಮೇ 2011ರವರೆಗೆ ಅಂದಾಜು 973 ಮೆ.ವ್ಯಾ.ನಷ್ಟು ವಿದ್ಯುತ್ತನ್ನು ಪ್ರತಿದಿನ ಖರೀದಿಸುತ್ತಿದೆ. ಅಲ್ಲದೆ, ಮುಂಬರುವ ಬೇಸಿಗೆ ಕಾಲದಲ್ಲಿ ವಿದ್ಯುತ್ ಬೇಡಿಕೆ ಹೆಚ್ಚುವುದರ ವಿಷಯವನ್ನು ಗಮನದಲ್ಲಿಟ್ಟುಕೊಂಡು, ಜನವರಿ–2011 ರಿಂದ ಏಪ್ರಿಲ್–2011ರವರೆಗೆ ಅಂದಾಜು 200 ಮೆ.ವ್ಯಾ.ನಷ್ಟು ಹೆಚ್ಚುವರಿ ವಿದ್ಯುತ್ತನ್ನು ಛತ್ತೀಸ್‌ಗಢ ಸರ್ಕಾರದಿಂದ ಮೆ: ಪಿ.ಟಿ.ಸಿ. ಇಂಡಿಯಾ ಮುಖಾಂತರ ಪ್ರತಿದಿನ ಖರೀದಿಸಲಾಗುತ್ತಿದೆ.

ಈ) ಮತ್ತು ಉ) ಹೌದು. ಪ್ರಸ್ತುತ ರಾಜ್ಯ ಸರ್ಕಾರವು ಅಂದಾಜು 1273 ಮೆ.ವ್ಯಾ.ಗಳಷ್ಟು ವಿದ್ಯುತ್ತನ್ನು ಮೇ 2011ರವರೆಗೆ ಸರಾಸರಿ ಯೂನಿಟ್ ದರ ರೂ. 4.89 ರಂತೆ ಪ್ರತಿದಿನ ಖಾಸಗಿ ವಿದ್ಯುತ್ ಉತ್ಪಾದನಾ ಕಂಪನಿಗಳಿಂದ ಖರೀದಿಸುತ್ತಿದೆ.